ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 30–01–2019

# PRESS RELEASE

## Workshop on *Adjudication Process under the Right to Information Act* in Bengaluru on February 2 : L. Krishna Murthy

BENGALURU, JANUARY 30 ( KARNATAKA INFORMATION ) :

The Karnataka Information Commission, for the first time in the history of the Commission, has organized a day-long workshop on *Adjudication Process under the Right to Information Act* in Bengaluru on February 2, according to its Chief Information Commissioner Mr L Krishna Murthy.

The workshop will be inaugurated by the Judge of the Supreme Court of India Mr Justice S. Abdul Nazeer at the Conference Hall in the Third Floor of Vidhana Soudha. The Acting Chief Justice of the High Court of Karnataka Mr Justice L. Narayana Swamy presides over this workshop, at which many dignitaries including the Judge of the Supreme Court Mr Justice Dinesh Maheshwari and Judge of the High Court of Karnataka Mr Justice Dixit Krishna Shripad are scheduled to participate.

One of the highlights of the workshop is the release of a Handbook on Right to Information Act, *Belakinedege* ( Towards Light ) containing not merely the Act and Rules, but also the latest judgments of Supreme Court and High Courts on the subject, besides, launch of a RTI Online Portal.

There will be a session on *Discretionary Powers of Information Commissioners under the Right to Information Act – 2005,* which will be Chaired by the Vice Chancellor of National Law Institute University at

Bhopal Dr V. Vijaya Kumar. The Judge of the High Court of Karnataka Mr Justice Dixit Krishna Shripad will deliver key note address on the occasion.

The retired Judge of the Supreme Court and former Acting Chairman of the National Human Rights Commission Mr Justice Shivaraj Patil will be the Chief Guest in the second session on *Right to Information Act as a tool for realizing fundamental rights and importance of Right to Information,* at which the former Central Information Commissioner Dr M. Sridhar Acharyulu, who is also the Professor of Law at the Benette University, will deliver the key note address.

Mr Venkatesh Nayak of the Commonwealth Human Rights Initiative will dwell on *Contours of the Powers of the Information Commission – A snap shot view based on developing Case Law.*

Before downing the curtains for the Valedictory Function, the Platform is thrown open for Public Information Officers and Invitees for Open Discussion and Interaction, says an official press release.

********

dpm

**<u>ಪತ್ರಿಕಾ ಪ್ರಕಟಣೆ</u>**

**ಫೆಬ್ರವರಿ 2 ರಂದು ಬೆಂಗಳೂರಿನಲ್ಲಿ ಮಾಹಿತಿ ಹಕ್ಕು ಕಾಯಿದೆಯಡಿ ತೀರ್ಪು ನೀಡುವ ವಿಧಾನ ಕುರಿತ ಕಾರ್ಯಾಗಾರ : ಎಲ್. ಕೃಷ್ಣಮೂರ್ತಿ**

**ಬೆಂಗಳೂರು, ಜನವರಿ 30 ( ಕರ್ನಾಟಕ ವಾರ್ತೆ ) :**

ಕರ್ನಾಟಕ ಮಾಹಿತಿ ಆಯೋಗವು, ಆಯೋಗದ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ, ಫೆಬ್ರವರಿ 2 ರಂದು ಬೆಂಗಳೂರಿನಲ್ಲಿ *ಮಾಹಿತಿ ಹಕ್ಕು ಕಾಯಿದೆಯಡಿ ತೀರ್ಪು ನೀಡುವ ವಿಧಾನ* ಕುರಿತ ಒಂದು–ದಿನದ ಕಾರ್ಯಾಗಾರವನ್ನು ಆಯೋಜಿಸಿದೆ ಎಂದು ಆಯೋಗದ ಮುಖ್ಯ ಮಾಹಿತಿ ಆಯುಕ್ತ ಎಲ್ ಕೃಷ್ಣಮೂರ್ತಿ ಅವರು ಪ್ರಕಟಿಸಿದ್ದಾರೆ.

ಈ ಕಾರ್ಯಾಗಾರವನ್ನು ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಭಾರತ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶ ನ್ಯಾಯಮೂರ್ತಿ ಎಸ್.

ಅಬ್ದುಲ್ ನಜೀರ್ ಅವರು ಉದ್ಘಾಟಿಸಲಿದ್ದಾರೆ. ಕರ್ನಾಟಕ ಉಚ್ಚ ನಾಯಾಲಯದ ಹಂಗಾಮಿ ಮುಖ್ಯ ನ್ಯಾಯಾಧೀಶ ನ್ಯಾಯಮೂರ್ತಿ ಎಲ್. ನಾರಾಯಣಸ್ವಾಮಿ ಅವರು ಅಧ್ಯಕ್ಷತೆ ವಹಿಸಲಿರುವ ಈ ಕಾರ್ಯಾಗಾರದಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶ ನ್ಯಾಯುಮೂರ್ತಿ ದಿನೇಶ್ ಮಹೇಶ್ವರಿ ಹಾಗೂ ಕರ್ನಾಟಕ ಉಚ್ಚ ನಾಯಾಲಯದ ನ್ಯಾಯಾಧೀಶ ನ್ಯಾಯಮೂರ್ತಿ ದೀಕ್ಷಿತ್ ಕೃಷ್ಣ ಶ್ರೀಪಾದ್ ಅವರೂ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಮಾಹಿತಿ ಹಕ್ಕು ಕಾಯಿದೆಗೆ ಸಂಬಂಧಿಸಿದ ಕಾಯಿದೆ ಮತ್ತು ನಿಯಮಾವಳಿಗಳು ಮಾತ್ರವಲ್ಲದೆ, ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನಾಯಾಲಯಗಳು ನೀಡಿರುವ ತೀರ್ಪುಗಳನ್ನು ಒಳಗೊಂಡ *ಬೆಳಕಿನೆಡೆಗೆ* ಕೈಪಿಡಿ ಬಿಡುಗಡೆ ಈ ಕಾರ್ಯಕ್ರಮದ ವಿಶೇಷತೆಗಳಲ್ಲೊಂದಾಗಿದೆ. ಅಲ್ಲದೆ, ಇದೇ ಸಂದರ್ಭದಲ್ಲಿ ಮಾಹಿತಿ ಹಕ್ಕು ವಿಷಯಕ್ಕೆ ಸಂಬಂಧಿಸಿದ ಆನ್‌ಲೈನ್ ಪೋರ್ಟಲ್‌ಗೆ ಚಾಲನೆ ದೊರೆಯಲಿದೆ.

ಭೂಪಾಲ್‌ನ ನ್ಯಾಷನಲ್ ಲಾ ಇನ್ಸ್‌ಸ್ಟಿಟ್ಯೂಟ್ ಯೂನಿವರ್ಸಿಟಿಯ ಕುಲಪತಿ ಡಾ ವಿ. ವಿಜಯ ಕುಮಾರ್ ಅವರು *ಮಾಹಿತಿ ಹಕ್ಕು ಕಾಯಿದೆ – 2005 ರಂತೆ ಮಾಹಿತಿ ಆಯುಕ್ತರ ವಿವೇಚನಾಧಿಕಾರ* ಕುರಿತ ಅಧಿವೇಶನದ ಅಧ್ಯಕ್ಷತೆವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಕರ್ನಾಟಕ ಉಚ್ಚ ನಾಯಾಲಯದ ನ್ಯಾಯಾಧೀಶ ನ್ಯಾಯಮೂರ್ತಿ ದೀಕ್ಷಿತ್ ಕೃಷ್ಣ ಶ್ರೀಪಾದ್‌ಅವರು ಆಶಯ ಭಾಷಣ ಮಾಡಲಿದ್ದಾರೆ.

ಮೂಲಭೂತ ಹಕ್ಕುಗಳನ್ನು ಸಾಕಾರಗೊಳಿಸಲು ಮಾಹಿತಿ ಹಕ್ಕು ಕಾಯಿದೆ ಒಂದು ಸಾಧನ ಹಾಗೂ ಮಾಹಿತಿ ಹಕ್ಕಿನ ಮಹತ್ವ ಕುರಿತ ಎರಡನೇ ಅಧಿವೇಶನದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರೂ ಹಾಗೂ ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಮಾಜಿ ಹಂಗಾಮಿ ಅಧ್ಯಕ್ಷರೂ ಆದ ನ್ಯಾಯುಮೂರ್ತಿ ಶಿವರಾಜ್ ಪಾಟೀಲ್ ಅವರು ಮುಖ್ಯ ಅತಿಥಿಯಾಗಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಮಾಹಿತಿ ಆಯೋಗದ ಮಾಜಿ ಆಯುಕ್ತರೂ ಆದ ಬೆನೆಟ್ ವಿಶ್ವವಿದ್ಯಾಲಯದ ಕಾನೂನು ಪ್ರಾಧ್ಯಾಪಕ ಡಾ ಎ. ಶ್ರೀಧರ್ ಆಚಾರ್ಯುಲು ಅವರು ಪ್ರಧಾನ ಭಾಷಣ ಮಾಡಲಿದ್ದಾರೆ.

ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಷಿಯೇಟಿವ್‌ನ ವೆಂಕಟೇಶ್ ನಾಯಕ್ ಅವರು ಮಾಹಿತಿ ಆಯೋಗದ ಅಧಿಕಾರದ ಹೊರ ರೇಖೆಗಳು – ಕ್ಷಿಪ್ರ ನೋಟ ಆಧರಿಸಿ ಕಾನೂನು ರೂಪಿಸುವಿಕೆ ಕುರಿತ ಬೆಳಕು ಚೆಲ್ಲಲಿದ್ದಾರೆ.

**ಸಮಾರೋಪ ಸಮಾರಂಭಕ್ಕೆ ತೆರೆ ಬೀಳುವ ಮುನ್ನ, ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಆಮಂತ್ರಿತರಿಗೆ ಮುಕ್ತ ಚರ್ಚೆ ಹಾಗೂ ಸಂವಾದಕ್ಕೆ ವೇದಿಕೆ ಕಲ್ಪಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

*****

**ಡಿ ಪಿ ಎಂ**

## ಫೆಬ್ರವರಿ 1 ರಂದು
## ಮಡಿವಾಳ ಮಾಚಿದೇವ ಜಯಂತಿ

**ಬೆಂಗಳೂರು, ಜನವರಿ 30 (ಕರ್ನಾಟಕ ವಾರ್ತೆ)**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಫೆಬ್ರವರಿ 1 ರ ಶುಕ್ರವಾರ ದಂದು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಸಂಜೆ 6–00 ಗಂಟೆ ಮಡಿವಾಳ ಮಾಚಿದೇವ ಜಯಂತಿಯನ್ನು ಕೆಂಗೇರಿ ಗುರುಪೀಠ ಮಠದ ಶ್ರೀ ಶಿವಯೋಗಾನಂದ ಮಹಾಪುರಿ ಮಹಾಸ್ವಾಮಿಗಳು, ಚಿತ್ರದುರ್ಗ ಮಠದ ಶ್ರೀ ಬಸವ ಮಾಚಿದೇವ ಮಹಾಸ್ವಾಮಿಗಳ ಹಾಗೂ ಮೂಡಬಿದಿರೆಯ ಕರಂಜೆ ಮಠದ ಶ್ರೀ ಮುಕ್ತಾನಂದ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಹಮ್ಮಿಕೊಂಡಿದೆ.

ಈ ಸಮಾರಂಭದಲ್ಲಿ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರು ಗೌರವ ಉಪಸ್ಥಿತರಾಗಿ ಪಾಲ್ಗೊಳ್ಳುವರು.

ಜನಸಂಪನ್ಮೂಲ (ಭಾರಿ ಮತ್ತು ಮಧ್ಯಮ ನೀರಾವರಿ) ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಡಿ. ಕೆ. ಶಿವಕುಮಾರ್ ಅವರು ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ. ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಚಿಕ್ಕಪೇಟೆ ಕ್ಷೇತ್ರದ ಶಾಸಕ ಡಾ. ಉದಯ್ ಬಿ. ಗರುಡಾಚಾರ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದು, ಅನೇಕ ಗಣ್ಯರು ಉಪಸ್ಥಿತರಿರುವರು.

ಅಂದು ಸಂಜೆ 4–30 ಗಂಟೆಗೆ ಸ್ವಾತಂತ್ರ್ಯ ಉದ್ಯಾನವನದಿಂದ ರವೀಂದ್ರ ಕಲಾಕ್ಷೇತ್ರದವರೆಗೆ ಶ್ರೀ ಮಡಿವಾಳ ಮಾಚಿದೇವ ಅವರ ಸ್ತಬ್ಧಚಿತ್ರದೊಂದಿಗೆ ಜಾನಪದ ಕಲಾತಂಡಗಳ ಮೆರವಣಿಗೆಯನ್ನು ಸಹ ಹಮ್ಮಿಕೊಳ್ಳಲಾಗಿದೆ.

**ಬೆಂಗಳೂರು, ಜನವರಿ 30 (ಕರ್ನಾಟಕ ವಾರ್ತೆ)**